ಈ. ಹಾಗಿದ್ದಲ್ಲಿ ಅದನ್ನು ಮಂಜೂರು ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮ ಗಳೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ. ಹೌದು.

ಆ. ಹೌದು.

ಇ. ಇಲ್ಲ.

ಈ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ಈ ಪ್ರಶ್ನೆಯು (ಅ)ಗೆ ಉತ್ತರವಾಗಿ ಹೌದು ಎಂದು ಹೇಳ್ದೀರಿ. ಇದಕ್ಕೆ ಯಾವ ಮಂಜೂರಾತಿ ಸಿಕ್ಕುತ್ತದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದಕ್ಕೆ ಮೊನ್ನೆತಾನೇ ಅಂದರೆ ಜೂನ್ 1983ರಲ್ಲಿ ಮಂಜೂ ರಾತಿ ಸಿಕ್ಕಿದೆ.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ಈ ಪ್ರಶ್ನೆಯು (ಆ) ಉತ್ತರವಾಗಿ ಹೌದು ಎಂದು ಹೇಳಿ ದ್ದೀರಿ. ಆಲ್ಲದೆ ಸ್ವತಃ ನಾನೂ ಕೂಡ ಇದರ ಬಗ್ಗೆ ಒಂದು ಪತ್ರ ಬರೆದು ತಮ್ಮ ಗಮನಕ್ಕೂ ಸಹ ತಂದಿದ್ದೇನೆ. ಆದುದರಿಂದ ಇದರ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ಅನ್ನು ಆದಷ್ಟು ತೀವ್ರವಾಗಿ ಅಲ್ಲಿಂದ ತರಿಸಿಕೊಂಡು ಆ ಬಡ ರೈತರಿಗೆ ಆ ನೀರನ್ನು ಕೊಡುವ ಹಾಗೆ ತೀವ್ರವಾಗಿ ಮಂಜೂರಾತಿ ಮಾಡಿ ಕೆಲಸ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೊಳೆಯಲ್ಲಿ ನೀರು ಹೋದಾಗ ಅಡ್ಡಗಟ್ಟಿ ಹಾಕಿ ಅದರಿಂದ ಖಾಸಗಿಯವರು ನೇರವಾಗಿ ನೀರನ್ನು ತೆಗೆದುಕೊಂಡು ತಮ್ಮ ಸ್ವಂತ ಪಂಪ್ ಹೌಸನ್ನು ಏಳವಡಿಸಿ ಕೊಂಡು ಆ ನೀರನ್ನು ಉಪಯೋಗ ಮಾಡಿಕೊಳ್ಳಬಹುದು. ಆದರೆ ಅದನ್ನು ಸರ್ಕಾರದ ವತಿಯಿಂದ ಮಾಡಬೇಕಾದರೆ ಅದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಬೇಕಾದರೆ ಅದನ್ನು ತನಿಖೆ ಮಾಡಿಸುತ್ತೇನೆ.

ಶ್ರೀ ಎಂ. ಎಂ. ನಡಾಫ್.—ಆ ಹೊಳೆಯಲ್ಲಿ ತುಂಬಾ ನೀರು ಹರಿಯುವುದನ್ನು ಅಡ ಗಟ್ಟಿ ಹಾಕಿ, ನಿಲ್ಲಿಸಿ ಅದನ್ನು ಉಪಯೋಗ ಮಾಡಿಕೊಡಿ ಎಂದು ಕೇಳಿದರೆ ಖಾಸಗಿಯವರು ಅದನ್ನು ಉಪ ಯೋಗ ಮಾಡಿಕೊಳ್ಳಬಹುದು ಎಂದು ಉತ್ತರ ಹೇಳಿದ್ದಾರೆ. ನಾನು ಈ ಬಗ್ಗೆ ಅಲ್ಲಿನ ಎಕ್ಸಿಕ್ಯೂಟಿವ್ ಇಂಜನೀಯರ್‌ಗೂ ಪತ್ರ ಬರೆದು, ತಮ್ಮ ಅವಗಾಹನೆಗೂ ತಂದಿದ್ದೇನೆ. ಆದುದರಿಂದ ತಾವು ಅವ ರಿಂದ ಪತ್ರ ತರಿಸಿಕೊಂಡು ಈ ಕೆಲಸವನ್ನು ತೀವ್ರವಾಗಿ ಮಾಡುವುದಕ್ಕೆ ಮಂಜೂರಾತಿ ಕೊಟ್ಟರೆ ಆ ಬಡ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ನಿಮ್ಮನ್ನು ನಮ್ರವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎಲ್ಲಾ ವಿಚಾರವನ್ನೂ ನೋಡಿಸಿ ಆಮೇಲೆ ತೀರ್ಮಾನ ತೆಗೆದು ಕೊಳ್ಳುತ್ತೇನೆ.

ವಿಷಯ :— ಉದ್ಯೋಗಾವಕಾಶವನ್ನೊದಗಿಸಲು ಮೈಸೂರು ನಗರದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ.

ಪ್ರಶ್ನೆ 124(49) ಶ್ರೀ.ಹೆಚ್. ಗಂಗಾಧರನ್ (ಕೃಷ್ಣರಾಜ) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಮೈಸೂರು ನಗರದಲ್ಲಿ ಕಳೆದ ಐದು ವರ್ಷಗಳಿಂದೀಚೆಗೆ ವರ್ಷಂಪ್ರತಿ ಎಷ್ಟು ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ನೀಡಲಾಗಿದೆ ;

ಆ. ಅವುಗಳಿಗೆ ಹೂಡಿದ ಬಂಡವಾಳದ ಮೊತ್ತವೆಷ್ಟು ;

ಇ. ಎಷ್ಟು ಜನಗಳಿಗೆ ಉದ್ಯೋಗಾವಕಾಶಗಳಿವೆ ?

ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—ಉತ್ತರಗಳನ್ನು ಅನುಬಂಧದಲ್ಲಿ ಕೂಡಲಾಗಿದೆ.

ಅನುಬಂಧ

ANNEXURE

ವರ್ಷ Year	ಸ್ಥಾಪಿತವಾದ ಘಟಕಗಳು Units set up		ಹೂಡಿದ ಬಂಡವಾಳ (ಲಕ್ಷ ರೂ.ಗಳಲ್ಲಿ) Amount invested (in lakhs of Rs.)		ಉದ್ಯೋಗಾವಕಾಶ Employment	
	ಭಾರಿ Large	ಮಧ್ಯಮ Medium	ಭಾರಿ Large	ಮಧ್ಯಮ Medium	ಭಾರಿ Large	ಮಧ್ಯಮ Medium
1978–79	1	5	N.A.	755.00	N.A.	582
79–80	5	3	743.73	308.00	3552	506
80-81	7	3	992.09	317.50	1432	502
81–82	5	11	1015.09	883.20	4376	1307
82–83	6	2	2429.00	N.A.	1275	N.A.
	24	24	5,179.91	2,264.43	10,635	3,141

N.A. :—Information is not available in case of such units which have approached D.G.T.D. directly.

ಡಿ.ಜಿ.ಟಿ.ಡಿ.ಯನ್ನು ನೇರವಾಗಿ ಸಂಪರ್ಕಿಸಿದ ಘಟಕಗಳ ವಿವರಗಳು ಇರುವುದಿಲ್ಲ.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, 1978-79, 1979-80, 1980-81, 1981-82 ಮತ್ತು 1982-83ರವರೆಗೆ 24 ಭಾರಿ ಉದ್ಯಮಗಳು ಹಾಗೂ 24 ಮಧ್ಯಮ ಉದ್ಯಮಗಳು ಸ್ಥಾಪಿತ ವಾಗಿವೆ. ಇದರಲ್ಲಿ ಸರ್ಕಾರದ ನೆರವು ಪಡೆದಿರುವಂಥಾದ್ದು ಎಷ್ಟು ಇವೆ, ಖಾಸಗಿಯವರದ್ದು ಎಷ್ಟು ಇವೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರಲ್ಲಿ ಹೆಚ್ಚಾಗಿ ಇರತಕ್ಕಂಥಾದ್ದು ಪ್ರೈವೇಟ್ ಸೆಕ್ಟಾರ್ ನಲ್ಲಿರುವುದೇ ಜಾಸ್ತಿ.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, 1981-82 ರಲ್ಲಿ ಭಾರಿ ಉದ್ಯಮಕ್ಕೆ 10 ಕೋಟಿ ರೂಪಾಯಿ ಬಂಡವಾಳ ಹಾಕಿ ಅದರಲ್ಲಿ 4376 ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ. ಅದೇ 1982-83 ರಲ್ಲಿ 24 ಕೋಟಿ ರೂಪಾಯಿ ಬಂಡವಾಳ ಹಾಕಿ 1275 ಜನಕ್ಕೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. ಇದಕ್ಕೆ ಕಾರಣ ಏನು ? ಎಲ್ಲಿ ಬಂಡವಾಳವನ್ನು ಹೆಚ್ಚು ಹಾಕಿದ್ದೀರೋ ಅಲ್ಲಿ ಉದ್ಯೋಗದ ಅವಕಾಶ ಕಡಿಮೆಯಾಗಿದೆ ಎಲ್ಲಿ ಕಡಿಮೆ ಬಂಡವಾಳ ಹಾಕಿದ್ದೀರೋ ಅಲ್ಲಿ ಉದ್ಯೋಗ ಕೊಟ್ಟಿರುವುದು ಜಾಸ್ತಿಯಾಗಿದೆ ಇದಕ್ಕೆ ಕಾರಣ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉದ್ಯೋಗಾವಕಾಶ ಬಂಡವಾಳವನ್ನು ಹೂಡತಕ್ಕದ್ದರ ಮೇಲೆ ಅವಲಂಬಿಸಿರುವುದಿಲ್ಲ. ಟೆಕ್ಸ್‌ಟೈಲ್ ಮಿಲ್‌ಗಳನ್ನು ಪ್ರಾರಂಭ ಮಾಡುವುದಾದರೆ ಸಾವಿರಾರು ಜನ ಕೆಲಸಗಾರರು ಬೇಕಾಗುತ್ತದೆ. ಅದೇ ಇಂಜನಿಯರಿಂಗ್ ಇಂಡಸ್ಟ್ರೀಸ್ ಮಾಡುವುದಾದರೆ ಕಡಿಮೆ ಜನರಿಗೆ ಕೆಲಸ ಸಿಕ್ಕುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಖಾಸಗಿ ಬಂಡವಾಳಗಾರರಿಗೆ ಸರ್ಕಾರದ ವತಿಯಿಂದ ಕೆ. ಎಸ್. ಎಫ್. ಸಿ. ಮುಂತಾದ ಸಂಸ್ಥೆಗಳಿಂದ ಎಷ್ಟು ಹಣವನ್ನು ಒದಗಿಸಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೇಳತಕ್ಕ ವಿಷಯ ನನ್ನಲ್ಲಿಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ತಾವು ಹೇಳಿದ ರೀತಿಯಲ್ಲಿ ಹೆಚ್ಚು ಬಂಡವಾಳ ಹೂಡಿದರೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಿಲ್ಲ. ಆಧುನಿಕ ಯಂತ್ರಗಳನ್ನು ಉಪಯೋಗ ಮಾಡಿದರೆ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯು ಹೆಚ್ಚುತ್ತದೆ. ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ತಾವು ಯಾವ ರೀತಿಯಲ್ಲಿ ಬಗೆಹರಿಸುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ಮನಗಂಡು ಹೊಸ ಸರ್ಕಾರ ತನ್ನ ಕೈಗಾರಿಕಾ ನೀತಿಯನ್ನು ಬದಲಾವಣೆ ಮಾಡಿದೆ. ಆದ್ದರಿಂದಲೇ ನಾವು ಹೆಚ್ಚು ಹೆಚ್ಚಾಗಿ ಸಣ್ಣ ಕೈಗಾರಿಕೆ ಗ್ರಾಮೀಣ ಕೈಗಾರಿಕೆಗಳಿಗೆ, ಮತ್ತು ಗುಡಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಪ್ರೋತ್ಸಾಹ ಕೊಡುತಕ್ಕ ನೀತಿಯನ್ನು ಅಳವಡಿಸಿಕೊಂಡಿದ್ದೇವೆ. ದೊಡ್ಡ ಕೈಗಾರಿಕೆಗಳು ಬಂದರೆ ಅದರಿಂದ ಹೆಚ್ಚಿನ ಉದ್ಯೋಗ ಸಮಸ್ಯೆ ನಿವಾರಣೆಯಾಗಲಾರದು. ನಾವು ಈಗಾಗಲೇ ವಿಕೇಂದ್ರೀಕರಣ ನೀತಿಯನ್ನು ಪ್ರಕಟಣೆ ಮಾಡಿದ್ದೇವೆ.

ಶ್ರೀ ಎಚ್. ಗಂಗಾಧರನ್.—24 ಭಾರಿ ಉದ್ದಿಮೆದಾರರಲ್ಲಿ ಕರ್ನಾಟಕದವರು ಎಷ್ಟು ಜನರು ಇದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇರೆ ರಾಜ್ಯದವರು ಎಷ್ಟು ಜನರಿದ್ದಾರೆನ್ನುವ ವಿವರ ನನ್ನಲ್ಲಿಲ್ಲ.

ವಿಷಯ :— ಅರಸೀಕೆರೆ ಕ್ಷೇತ್ರದಲ್ಲಿ ಉತ್ತಮವಾದ ಕೂಡು ರಸ್ತೆಗಳ ನಿರ್ಮಾಣ ಕುರಿತು

ಪ್ರಶ್ನೆ 126(63) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಅರಸೀಕೆರೆ ಕ್ಷೇತ್ರದಲ್ಲಿ ಉತ್ತಮವಾದ ಕೂಡು ರಸ್ತೆಗಳಿಲ್ಲದೇ ಇರುವ ಗ್ರಾಮಗಳ ಸಂಖ್ಯೆ ಎಷ್ಟು ? (ಗ್ರಾಮವಾರು ಪಟ್ಟಿಯನ್ನು ದಯವಿಟ್ಟು ಒದಗಿಸುವುದು);

ಆ. 1983ನೇ ಸಾಲಿನಲ್ಲಿ ಅವಶ್ಯವಿದ್ದ ಕಡೆ ಆ ಕೂಡು ರಸ್ತೆಗಳನ್ನು ನಿರ್ಮಿಸಬೇಕೆಂದು ಹಾಗೂ ದುಸ್ಥಿತಿಯಲ್ಲಿರುವ ರಸ್ತೆಗಳನ್ನು ದುರಸ್ತು ಮಾಡಲು ಸರ್ಕಾರದವರು ಸಂಬಂಧಪಟ್ಟ ಇಲಾಖೆಗೆ ಸೂಚನೆ ಕೊಟ್ಟಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. 14 ಗ್ರಾಮಗಳು. ಗ್ರಾಮಮಾರುಕಟ್ಟೆ ಈ ಕೆಳಕಂಡಂತೆ ಇದೆ.

1. ಜನ್ನಾಪುರ, 2. ಕರಲಹಳ್ಳಿ, 3. ಅರೇಕಲ್ಲುಅರಣ್ಯ, 4. ಹಳ್ಳಿ ತಿಮ್ಮನಹಳ್ಳಿ, (ಹೊರಕನಕಟ್ಟೆ) 5. ಸಲಮರಹಳ್ಳಿ, 6. ಬೆಟ್ಟದಪುರ, 7. ಮಾಸ್ತಿಹಳ್ಳಿ, 8. ಬಸವ ರಾಜಪುರ, 9. ದೇವಗೊಂಡನ ಹಳ್ಳಿ, 10. ವೆಂಕಟಾಪುರ, 11. ಆನಂದನಹಳ್ಳಿ, 12. ರಾಂಪುರ, 13. ಗೊಲ್ಲರಹಳ್ಳಿ, 14. (ದುಮ್ಮೇನಹಳ್ಳಿ) ಹರಳಕಟ್ಟೆ.

ಆ. ಇಲ್ಲ. ಈ ಕೂಡುರಸ್ತೆಗಳಾವುವೂ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೊಳಪಡುವುದಿಲ್ಲ.